# <u>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ :: ಕೇಂದ್ರ ಕಛೇರಿ :: ಬೆಂಗಳೂರು</u>

ಸಂಖ್ಯೆ:ಬೆಂಮಸಾಸಂ/ಕೇಕ/ನೇಮಕ/ಆರ್1/ 4361 /2017-18 ದಿನಾಂಕ: 5 -12-2017

**ಜಾಹೀರಾತು ಸಂಖ್ಯೆ: 01 /2017**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಚಾಲಕ, ನಿರ್ವಾಹಕ, ಸಹಾಯಕ ಸಂಚಾರ ನಿರೀಕ್ಷಕ, ಭದ್ರತಾ ರಕ್ಷಕ, ಕುಶಲಕರ್ಮಿ ಹಾಗೂ ತಾಂತ್ರಿಕ ಸಹಾಯಕ ಹುದ್ದೆಗಳನ್ನು ಸಂಸ್ಥೆಯು ಅಳವಡಿಸಿಕೊಂಡಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982 ಹಾಗೂ ಅದರ ತಿದ್ದುಪಡಿಗಳ ಅನುಸಾರ ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ (ON LINE) ಮುಖಾಂತರ ಆಹ್ವಾನಿಸಲಾಗಿದೆ. ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು ನೇಮಕಾತಿ ಸಮಯದಲ್ಲಿ ಮಾರ್ಪಡಿಸಬಹುದಾಗಿರುತ್ತದೆ. ಹುದ್ದೆಗಳ ಮೀಸಲಾತಿ ವರ್ಗೀಕರಣ ಈ ಕೆಳಕಂಡಂತಿರುತ್ತದೆ.

**1)ಚಾಲಕ ಹುದ್ದೆ:**(159ನೇ ಆವೃತ್ತದ 26ನೇ ಬಿಂದುವಿನಿಂದ 163ನೇ ಆವೃತ್ತದ 17ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 12 | 03 | 04 | 12 | 04 | 04 | 05 | 44 | 88 |
| ಮಹಿಳಾ ಮೀಸಲು | 20 | 04 | 06 | 19 | 06 | 06 | 05 | 64 | 130 |
| ಗ್ರಾಮೀಣ ಮೀಸಲು | 15 | 02 | 04 | 15 | 04 | 04 | 05 | 49 | 98 |
| ಕನ್ನಡ ಮಾಧ್ಯಮ | 03 | 01 | - | 03 | - | - | 01 | 09 | 17 |
| ಯೋಜನಾ ನಿರಾಶ್ರಿತರು | 03 | 01 | - | 03 | - | - | 01 | 10 | 18 |
| ಮಾಜಿ ಸೈನಿಕರು | 06 | 01 | 02 | 06 | 02 | 02 | 02 | 20 | 41 |
| ಒಟ್ಟು | 59 | 12 | 16 | 58 | 16 | 16 | 19 | 196 | 392 |

**2) ನಿರ್ವಾಹಕ ಹುದ್ದೆ (ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಗಳು):**

(54ನೇ ಆವೃತ್ತದ 30ನೇ ಬಿಂದುವಿನಿಂದ 56ನೇ ಆವೃತ್ತದ 12ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 10 | 01 | 01 | 10 | 01 | 01 | 02 | 32 | 58 |
| ಮಹಿಳಾ ಮೀಸಲು | 13 | 03 | 04 | 13 | 04 | 04 | 05 | 46 | 92 |
| ಗ್ರಾಮೀಣ ಮೀಸಲು | 10 | 02 | 03 | 10 | 03 | 02 | 03 | 35 | 68 |
| ಕನ್ನಡ ಮಾಧ್ಯಮ | 02 | 01 | 01 | 02 | 01 | 01 | 01 | 07 | 16 |
| ಯೋಜನಾ ನಿರಾಶ್ರಿತರು | 02 | 01 | 01 | 02 | 01 | 01 | 01 | 07 | 16 |
| ಮಾಜಿ ಸೈನಿಕರು | 05 | 01 | 02 | 04 | 02 | 02 | 02 | 15 | 33 |
| ಒಟ್ಟು | 42 | 9 | 12 | 41 | 12 | 11 | 14 | 142 | 283 |

**3) ನಿರ್ವಾಹಕ ಹುದ್ದೆ (ಜೆಓಸಿ ವಿದ್ಯಾರ್ಹತೆ):**

(10ನೇ ಆವೃತ್ತದ 07ನೇ ಬಿಂದುವಿನಿಂದ 11ನೇ ಆವೃತ್ತದ 47ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ್ರ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 04 | 01 | 02 | 04 | 02 | 02 | 01 | 15 | 31 |
| ಮಹಿಳಾ ಮೀಸಲು | 07 | 01 | 02 | 07 | 02 | 02 | 03 | 23 | 47 |
| ಗ್ರಾಮೀಣ ಮೀಸಲು | 05 | 01 | - | 06 | - | - | 02 | 17 | 31 |
| ಕನ್ನಡ ಮಾಧ್ಯಮ | 01 | - | - | 01 | - | - | - | 04 | 6 |
| ಯೋಜನಾ ನಿರಾಶ್ರಿತರು | 02 | - | - | 02 | 01 | 01 | - | 04 | 10 |
| ಮಾಜಿ ಸೈನಿಕರು | 02 | 01 | 01 | 02 | 01 | 01 | 01 | 07 | 16 |
| ಒಟ್ಟು | 21 | 4 | 5 | 22 | 6 | 6 | 7 | 70 | 141 |

4) ಸಹಾಯಕ ಸಂಚಾರ ನಿರೀಕ್ಷಕ: ( 3ನೇ ಆವೃತ್ತದ 79ನೇ ಬಿಂದುವಿನಿಂದ 4ನೇ ಆವೃತ್ತದ 1ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | - | - | - | - | - | - | - | 02 | 02 |
| ಮಹಿಳಾ ಮೀಸಲು | 02 | - | - | 01 | - | - | 02 | 04 | 09 |
| ಗ್ರಾಮೀಣ ಮೀಸಲು | 01 | - | 01 | 01 | 01 | 01 | - | 04 | 09 |
| ಕನ್ನಡ ಮಾಧ್ಯಮ | 01 | - | - | 01 | - | - | - | - | 02 |
| ಮಾಜಿ ಸೈನಿಕರು | - | - | - | - | - | - | - | 01 | 01 |
| ಒಟ್ಟು | 04 | - | 01 | 03 | 01 | 01 | 02 | 11 | 23 |

5) ಭದ್ರತಾ ರಕ್ಷಕ (2ನೇ ಆವೃತ್ತದ 54ನೇ ಬಿಂದುವಿನಿಂದ 4ನೇ ಆವೃತ್ತದ 2ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 05 | 1 | 1 | 6 | 01 | 01 | - | 17 | 32 |
| ಮಹಿಳಾ ಮೀಸಲು | 07 | 1 | 3 | 7 | 03 | 03 | 04 | 25 | 56 |
| ಗ್ರಾಮೀಣ ಮೀಸಲು | 06 | 2 | 1 | 5 | 01 | 01 | 02 | 18 | 36 |
| ಕನ್ನಡ ಮಾಧ್ಯಮ | 01 | - | - | 1 | - | - | 1 | 03 | 06 |
| ಯೋಜನಾ ನಿರಾಶ್ರಿತರು | 01 | - | - | 1 | - | - | - | 04 | 06 |
| ಮಾಜಿ ಸೈನಿಕರು | 02 | - | 1 | 2 | 1 | 01 | 01 | 08 | 16 |
| ಒಟ್ಟು | 22 | 04 | 06 | 22 | 06 | 06 | 08 | 75 | 149 |

6) ತಾಂತ್ರಿಕ ಸಹಾಯಕ ಹುದ್ದೆ: (10ನೇ ಆವೃತ್ತದ 12ನೇ ಬಿಂದುವಿನಿಂದ 17ನೇ ಆವೃತ್ತದ 73ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನರು(ಹಿಂಬಾಕಿ)* | 04 | 02 | 02 | 05 | 01 | - | 02 | - | 16 |
| ಸಾಮಾನ್ಯ | 20 | 04 | 06 | 20 | 06 | 06 | 07 | 65 | 134 |
| ಮಹಿಳಾ ಮೀಸಲು | 38 | 07 | 10 | 38 | 10 | 10 | 12 | 125 | 250 |
| ಗ್ರಾಮೀಣ ಮೀಸಲು | 28 | 06 | 07 | 28 | 07 | 07 | 10 | 96 | 189 |
| ಕನ್ನಡ ಮಾಧ್ಯಮ | 05 | 01 | 01 | 05 | 01 | 01 | 02 | 19 | 35 |
| ಯೋಜನಾ ನಿರಾಶ್ರಿತರು | 05 | 01 | 01 | 06 | 01 | 02 | 02 | 19 | 37 |
| ವಿಕಲ ಚೇತನರು | 06 | 01 | 02 | 06 | 02 | 02 | 01 | 19 | 39 |
| ಮಾಜಿ ಸೈನಿಕರು | 12 | 03 | 03 | 12 | 03 | 03 | 04 | 38 | 78 |
| ಒಟ್ಟು | 118 | 25 | 32 | 120 | 31 | 31 | 40 | 381 | 778 |

(* ವಿಕಲಚೇತನರ ಮೀಸಲಾತಿಯು ಶ್ರವಣದೋಷ ಉಳ್ಳವರು/ಕುಷ್ಠರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ)

7) ಕುಶಲಕರ್ಮಿ(ಆಟೋ ಮೆಕ್ಯಾನಿಕ್): (3ನೇ ಆವೃತ್ತದ 4ನೇ ಬಿಂದುವಿನಿಂದ 3ನೇ ಆವೃತ್ತದ 40ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ಪ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನರು(ಹಿಂಬಾಕಿ)# | - | - | - | 01 | - | - | - | - | 01 |
| ಸಾಮಾನ್ಯ | 01 | 01 | - | 01 | - | - | - | 03 | 06 |
| ಮಹಿಳಾ ಮೀಸಲು | 02 | | 01 | 02 | - | - | 01 | 06 | 12 |
| ಗ್ರಾಮೀಣ ಮೀಸಲು | 01 | - | 01 | 01 | 01 | 01 | | 05 | 10 |
| ಕನ್ನಡ ಮಾಧ್ಯಮ | 01 | - | - | 01 | - | - | - | 01 | 03 |
| ಯೋಜನಾ ನಿರಾಶ್ರಿತರು | - | - | - | - | - | - | - | 01 | 01 |
| ವಿಕಲಚೇತನರು | - | - | - | - | - | - | - | 01 | 01 |
| ಮಾಜಿ ಸೈನಿಕರು | - | - | - | 01 | 01 | - | - | 02 | 04 |
| ಒಟ್ಟು | 05 | 01 | 02 | 07 | 02 | 01 | 01 | 19 | 38 |

(* ವಿಕಲಚೇತನರ ಮೀಸಲಾತಿಯು ಶ್ರವಣದೋಷ ಉಳ್ಳ ಅಭ್ಯರ್ಥಿಗಳಿಗೆ ಮಾತ್ರ)

8) **ಕುಶಲಕರ್ಮಿ(ಆಟೋ ಬಾಡಿ ಬಿಲ್ಡರ್)** (1ನೇ ಆವೃತ್ತದ 67ನೇ ಬಿಂದುವಿನಿಂದ 1ನೇ ಆವೃತ್ತದ 72ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ವ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನರು(ಹಿಂಬಾಕಿ)# | 01 | - | - | 01 | - | - | - | 01 | 03 |
| ಸಾಮಾನ್ಯ | 01 | - | - | 01 | - | - | - | - | 02 |
| ಮಹಿಳಾ ಮೀಸಲು | - | 01 | - | - | - | - | - | 01 | 02 |
| ಗ್ರಾಮೀಣ ಮೀಸಲು | - | - | - | - | - | - | - | 01 | 01 |
| ವಿಕಲಚೇತನರು | - | - | - | - | - | - | - | 01 | 01 |
| ಒಟ್ಟು | 02 | 01 | - | 02 | - | - | - | 04 | 09 |

(* ವಿಕಲಚೇತನರ ಮೀಸಲಾತಿಯು ಶ್ರವಣದೋಷ ಉಳ್ಳವರು/ಕುಷ್ಠರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ)

9) **ಕುಶಲಕರ್ಮಿ(ಆಟೋ ಎಲೆಕ್ಟ್ರಿಷಿಯನ್):** (1ನೇ ಆವೃತ್ತದ 46ನೇ ಬಿಂದುವಿನಿಂದ 1ನೇ ಆವೃತ್ತದ 49ನೇ ಬಿಂದುವರೆಗೆ)

| ಮೀಸಲಾತಿ | ಪ.ಜಾ | ಪ.ಪಂ | ವ-1 | 2ಎ | 2ಬಿ | 3ಎ | 3ಬಿ | ಸಾ.ವ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನರು(ಹಿಂಬಾಕಿ)# | 01 | - | - | 01 | - | - | - | 01 | 03 |
| ಮಹಿಳಾ ಮೀಸಲು | 01 | - | - | - | - | 01 | - | - | 02 |
| ಗ್ರಾಮೀಣ ಮೀಸಲು | - | - | - | - | - | - | - | 01 | 01 |
| ವಿಕಲಚೇತನರು | - | - | - | - | - | - | - | 01 | 01 |
| ಒಟ್ಟು | 02 | - | - | 01 | - | 01 | - | 03 | 07 |

(* ವಿಕಲಚೇತನರ ಮೀಸಲಾತಿಯು ಶ್ರವಣದೋಷ ಉಳ್ಳ ಅಭ್ಯರ್ಥಿಗಳಿಗೆ ಮಾತ್ರ)

**ಟಿಪ್ಪಣಿ:** ಸಮತಲ ಮೀಸಲು ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**ಅರ್ಹತೆಗಳು: (ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 26.12.2017ರಂತೆ)**

## I ಶೈಕ್ಷಣಿಕ ವಿದ್ಯಾರ್ಹತೆ :

**ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಕೆಳಗೆ ನಮೂದಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು. ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.**

| **ಹುದ್ದೆ** | **ವಿದ್ಯಾರ್ಹತೆ** |
|---|---|
| **ಚಾಲಕ** | ಅ) ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು.<br>ಆ) ನಿಗಧಿತ ದೇಹ ದಾರ್ಢ್ಯತೆ ಹೊಂದಿರಬೇಕು.<br>ಇ) HPV / HTV ಅಥವಾ HGV ಚಾಲನಾ ಪರವಾನಗಿಯನ್ನು ಹೊಂದಿ ಕನಿಷ್ಠ ಎರಡು ವರ್ಷಗಳಾಗಿರಬೇಕು. ಪರವಾನಗಿ ಚಾಲ್ತಿಯಲ್ಲಿರಬೇಕು ಮತ್ತು ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು. |
| **ನಿರ್ವಾಹಕ (ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆ ಗಳಲ್ಲಿ ಉತ್ತೀರ್ಣ)** | ಅ) ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು<br>ಆ) ಅರ್ಜಿ ಸಲ್ಲಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕ ಹಾಗೂ ದಾಖಲಾತಿಗಳ ಪರಿಶೀಲನೆ ದಿನಾಂಕದಂದು ಚಾಲ್ತಿಯಲ್ಲಿರುವ ಮೋಟಾರು ವಾಹನ ನಿರ್ವಾಹಕರ ಪರವಾನಗಿ ಮತ್ತು ಬ್ಯಾಡ್ಜ್ ಹೊಂದಿರಬೇಕು |
| 3)ನಿರ್ವಾಹಕ (ಜೆ.ಓ.ಸಿ ವಿದ್ಯಾರ್ಹತೆ) | ಅ) ಜೆ.ಓ.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು<br>ಆ) ಅರ್ಜಿ ಸಲ್ಲಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕ ಹಾಗೂ ದಾಖಲಾತಿಗಳ ಪರಿಶೀಲನೆ ದಿನಾಂಕದಂದು ಚಾಲ್ತಿಯಲ್ಲಿರುವ ಮೋಟಾರು ವಾಹನ ನಿರ್ವಾಹಕರ ಪರವಾನಗಿ ಮತ್ತು ಬ್ಯಾಡ್ಜ್ ಹೊಂದಿರಬೇಕು |

| ಹುದ್ದೆ | ವಿದ್ಯಾರ್ಹತೆ |
|---|---|
| ಸ.ಸಂಚಾರ ನಿರೀಕ್ಷಕ | ಪಿ.ಯು.ಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು |
| ಭದ್ರತಾ ರಕ್ಷಕ | ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.<br>ಅಥವಾ ಮಾಜಿ ಸೈನಿಕರಾಗಿದ್ದು, ದರ್ಜೆ–2 ರ ಆರ್ಮಿ ಸರ್ಟಿಫಿಕೇಟ್ ಅಥವಾ ನೌಕಾಥಳ/ವಾಯುಥಳದಲ್ಲಿ ತತ್ಸಮಾನ ದರ್ಜೆಯ ಸರ್ಟಿಫಿಕೇಟ್ ಹೊಂದಿರಬೇಕು |
| ಕುಶಲಕರ್ಮಿ(ಆಟೋ ಮೆಕ್ಯಾನಿಕ್, ಆಟೋ ಬಾಡಿ ಬಿಲ್ಡರ್, ಆಟೋ ವೆಲ್ಡರ್, ಆಟೋ ಮೆಷಿನಿಸ್ಟ್, ಆಟೋ ಪೇಂಟರ್ ) | ಅ)ಅಂಗೀಕೃತ ಸಂಸ್ಥೆಯೊಂದರಿಂದ ಮೆಕ್ಯಾನಿಕಲ್/ಆಟೋಮೊಬೈಲ್/ವೆಲ್ಡಿಂಗ್ ಅಂಡ್ ಶೀಟ್ ಮೆಟಲ್ ಟೆಕ್ನಾಲಜಿ ಇಂಜಿನಿಯರಿಂಗ್ ನಲ್ಲಿ 3 ವರ್ಷದ ಡಿಪ್ಲೋಮ ಹೊಂದಿರಬೇಕು.<br>ಆ)ಚಾಲ್ತಿಯಲ್ಲಿರುವ ಬಾರಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಅಥವಾ ಪರೀಕ್ಷಾರ್ಥಿ ಅವಧಿ ಪೂರ್ಣಗೊಳ್ಳುವುದರೊಳಗಾಗಿ ಬಾರಿ ವಾಹನ ಚಾಲನಾ ಪರವಾನಗಿಯನ್ನು ಪಡೆಯಬೇಕು. |
| ಕುಶಲ ಕರ್ಮಿ(ಆಟೋ ಎಲೆಕ್ಟ್ರಿಷಿಯನ್) | ಅ)ಅಂಗೀಕೃತ ಸಂಸ್ಥೆಯೊಂದರಿಂದ ಎಲೆಕ್ಟ್ರಿಕಲ್/ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್/ ಮೆಕೆಟ್ರಾನಿಕ್ಸ್ ಇಂಜಿನಿಯರಿಂಗ್/ರೆಫ್ರಿಜರೇಷನ್ ಅಂಡ್ ಏರ್ ಕಂಡಿಷನಿಂಗ್ ನಲ್ಲಿ 3 ವರ್ಷದ ಡಿಪ್ಲೋಮ ಹೊಂದಿರಬೇಕು<br>ಆ)ಚಾಲ್ತಿಯಲ್ಲಿರುವ ಬಾರಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು ಅಥವಾ ಪರೀಕ್ಷಾರ್ಥಿ ಅವಧಿ ಪೂರ್ಣಗೊಳ್ಳುವುದರೊಳಗಾಗಿ ಬಾರಿ ವಾಹನ ಚಾಲನಾ ಪರವಾನಗಿಯನ್ನು ಪಡೆಯಬೇಕು. |
| ತಾಂತ್ರಿಕ ಸಹಾಯಕ | ಪ್ರೌಢ ಶಿಕ್ಷಣ ಮಂಡಳಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ತಾಂತ್ರಿಕ ಮಂಡಳಿಯಿಂದ ಅಥವಾ ಸರ್ಕಾರದಿಂದ ಅಂಗೀಕೃತವಾದ ಒಂದು ಸಂಸ್ಥೆಯಿಂದ ಮೆಕ್ಯಾನಿಕ್(ಮೋಟಾರ್ ವೆಹಿಕಲ್)/ಡಿಸೆಲ್ ಮೆಕ್ಯಾನಿಕ್/ ಆಟೋ ಎಲೆಕ್ಟ್ರಿಷಿಯನ್/ ವೆಲ್ಡರ್/ಶೀಟ್ ಮೆಟಲ್ ವರ್ಕರ್/ ಎಲೆಕ್ಟ್ರಾನಿಕ್ ಮೆಕ್ಯಾನಿಕ್/ ಅಪಹೋಲ್‌ಸ್ಟ್ರಿ/ ಡ್ರಾಫ್ಟ್ಸ್‌ಮ್ಯಾನ್(ಮೆಕ್ಯಾನಿಕಲ್)/ ಫಿಟ್ಟರ್/ ಮೆಷಿನಿಸ್ಟ್/ ಟೈರ್ ಪಿಟ್ಟಿಂಗ್/ ವಲ್ಕನೈಸಿಂಗ್/ ಪೇಟಿಂಗ್/ ರೆಫ್ರಿಜರೇಷನ್ ಅಂಡ್ ಏರ್ ಕಂಡಿಷನಿಂಗ್/ ಟರ್ನರ್/ ಆಟೋಮೊಬೈಲ್/ ಎಲೆಕ್ಟ್ರಿಕಲ್/ ಎಲೆಕ್ಟ್ರಾನಿಕ್ಸ್/ ಫ್ಯಾಬ್ರಿಕೇಷನ್(ಫಿಟ್ಟಿಂಗ್ & ವೆಲ್ಡಿಂಗ್) ವೃತ್ತಿಗಳಲ್ಲಿ ಐ.ಟಿ.ಸಿ /ಐ.ಟಿ.ಐ / ಎನ್.ಎ.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>ಪರೀಕ್ಷಾರ್ಥಿ ಅವಧಿ ಪೂರ್ಣಗೊಳ್ಳುವುದರೊಳಗಾಗಿ ಲಘು ವಾಹನ ಚಾಲನಾ ಪರವಾನಗಿಯನ್ನು ಪಡೆಯಬೇಕು. |

## **II. ವಯೋಮಿತಿ** :

1) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 26.12.2017 ರಂದು ಈ ಕೆಳಕಂಡ ಕನಿಷ್ಠ ವಯೋಮಿತಿ ಹೊಂದಿರಬೇಕು ಮತ್ತು ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| ವರ್ಗ | ಚಾಲಕ ಹುದ್ದೆಗೆ | | ನಿರ್ವಾಹಕ, ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ, ಭದ್ರತಾ ರಕ್ಷಕ ಮತ್ತು ತಾಂತ್ರಿಕ ಸಹಾಯಕ ಹುದ್ದೆಗೆ | |
|---|---|---|---|---|
| | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ |
| ಸಾಮಾನ್ಯ ವರ್ಗ | 24ವರ್ಷಗಳು | 35ವರ್ಷಗಳು | 18 ವರ್ಷಗಳು | 35ವರ್ಷಗಳು |
| 2ಎ/2ಬಿ/3ಎ/3ಬಿ | 24ವರ್ಷಗಳು | 38 ವರ್ಷಗಳು | 18 ವರ್ಷಗಳು | 38 ವರ್ಷಗಳು |
| ಪ.ಜಾತಿ/ಪ.ಪಂ/ ವರ್ಗ–1 | 24ವರ್ಷಗಳು | 40 ವರ್ಷಗಳು | 18 ವರ್ಷಗಳು | 40 ವರ್ಷಗಳು |

2) ಇಲಾಖಾ ಅಭ್ಯರ್ಥಿಗಳು ಅವರು ಸಲ್ಲಿಸಿದ ಪ್ರತಿ ಪೂರ್ಣಗೊಂಡ ಸೇವಾವಧಿಗೆ ಒಂದು ವರ್ಷದಂತೆ ಸೇವಾವಧಿಯ ಗರಿಷ್ಠ 10 ವರ್ಷಗಳಿಗೆ ಮೀರದಂತೆ ವಯೋಮಿತಿ ರಿಯಾಯಿತಿಗೆ ಅರ್ಹರು, ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

3) ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷಗಳ ಸೇವೆ ಸಲ್ಲಿಸಿರಬೇಕು ಮತ್ತು ಅವರು ಸಲ್ಲಿಸಿದ ಸೇವೆಯ ಜೊತೆಗೆ 3 ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರು, ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

## III. ದೇಹದಾರ್ಢ್ಯತೆ:

ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆ ಹೊಂದಿರಬೇಕು.

| | ಚಾಲಕ, ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ ಮತ್ತು ತಾಂತ್ರಿಕ ಸಹಾಯಕ, ಭದ್ರತಾ ರಕ್ಷಕ ಹುದ್ದೆಗೆ | | ನಿರ್ವಾಹಕ ಹುದ್ದೆಗೆ | |
|---|---|---|---|---|
| | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು |
| ಎತ್ತರ | 163 ಸೆಂ ಮೀ | 153 ಸೆ.ಮೀ | 160 ಸೆಂ ಮೀ | 150 ಸೆ.ಮೀ |
| ತೂಕ | 55 ಕೆ.ಜಿ | 50 ಕೆ.ಜಿ | - | - |

## IV. ಜಾತಿ/ವರ್ಗ ಮೀಸಲಾತಿ:

**ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು:**

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ-ಡಿ ರಲ್ಲಿ,

ಆ) ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ-ಇ ರಲ್ಲಿ,

ಇ) ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ-ಎಫ್ ರಲ್ಲಿ ಚಾಲ್ತಿಯಲ್ಲಿರುವ ಹಾಗೂ ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಕೊನೆಯ ದಿನಾಂಕ:26.12.2017 ರೊಳಗಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಂದಿದ್ದಲ್ಲಿ ಮಾತ್ರ ಆಯಾ ಗುಂಪಿನ ಮೀಸಲಾತಿ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

ಈ)ಪರಿವಾರ, ತಳವಾರ, ಮಾಲೇರು, ಕುರುಬ, ಬೆಸ್ತ ಮತ್ತು ಕೋಳಿ ಜಾತಿಗೆ ಸೇರಿದ ಅಭ್ಯರ್ಥಿಗಳು ಪರಿಶಿಷ್ಠ ಪಂಗಡದ ನಾಯಕ, ಮಲೇರು, ಕಾಡು ಕುರುಬ, ಜೇನು ಕುರುಬ, ಗೊಂಡ, ರಾಜ್‌ಗೊಂಡ, ಕೋಳಿದೋರ ಮತ್ತು ಟೋಕ್ರಿ ಕೋಳಿ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದಲ್ಲಿ ಅವುಗಳು ಅಸಿಂಧು ಆಗುತ್ತವೆ. ಆದುದರಿಂದ, ಪರಿಶಿಷ್ಠ ಪಂಗಡದ ನಾಯಕ, ಮಾಲೇರು, ಕಾಡು ಕುರುಬ, ಜೇನು ಕುರುಬ, ಗೊಂಡ, ರಾಜ್‌ಗೊಂಡ, ಕೋಳಿದೋರ ಮತ್ತು ಟೋಕ್ರಿ ಕೋಳಿ ಜಾತಿಗೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: **ಎಸ್‌ಡಬ್ಲೂಡಿ /713/ಎಸ್‌ಎಡಿ/93** ದಿನಾಂಕ:11/03/2002 ರನ್ವಯ ದಿನಾಂಕ:11/03/2002ರ ನಂತರ ಹಾಗೂ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಪಡೆದ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು.

## V. ಗ್ರಾಮೀಣ ಮೀಸಲಾತಿ:

ಅ) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:08:ಸೆನೆನಿ:2001, ದಿನಾಂಕ:13/02/2001 ರಂತೆ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ವಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದ ಪ್ರಮಾಣ ಪತ್ರದ ಮೇಲೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಮಾಡಿಸಿದ ಪ್ರಮಾಣ ಪತ್ರ ಸಲ್ಲಿಸಿ ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.

ಆ) ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ ಹೊಂದಿರಬೇಕು. (ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.

## VI. ಕನ್ನಡ ಮಾಧ್ಯಮ ಮೀಸಲಾತಿ :

ಅಭ್ಯರ್ಥಿಯು 1ನೇ ತರಗತಿಯಿಂದ 10ನೇ ತರಗತಿಯವರೆಗಿನ ಎಲ್ಲಾ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/71 /ಸೆನೆನಿ/ 2001, ದಿನಾಂಕ:24/10/2002 ರನ್ವಯ ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಹಾಗೂ ಮೊಹರು ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ ಮಾತ್ರ ಕನ್ನಡ ಮಾಧ್ಯಮ ಮೀಸಲಾತಿಗೆ ಅರ್ಹರಿರುತ್ತಾರೆ.

## VII. ಯೋಜನಾ ನಿರಾಶ್ರಿತರು :

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ /23/ಸೆನೆನಿ/99, ದಿನಾಂಕ:23/11/2000 ರಲ್ಲಿ ಸೂಚಿಸಿರುವಂತೆ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದಲ್ಲಿ ಯಾವುದಾದರೂ ಒಂದು ಐಟಂ ಸಂಪೂರ್ಣವಾಗಿ ಅನ್ವಯಿಸಿದಲ್ಲಿ ಮತ್ತು ಸದರಿ ನಮೂನೆಯನ್ನು ಸಮರ್ಪಕವಾಗಿ ಹಾಗೂ ಸಂಪೂರ್ಣವಾಗಿ ಭರ್ತಿ ಮಾಡಿದ ಪಕ್ಷದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹರಿರುತ್ತಾರೆ.(ಯೋಜನಾ ನಿರಾಶ್ರಿತರ ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಅಂಕಣದಲ್ಲಿ ನಮೂದಿಸತಕ್ಕದ್ದು).

## VIII. ಮಾಜಿ ಸೈನಿಕ ಮೀಸಲಾತಿ:

ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷಗಳ ಸೇವೆ ಸಲ್ಲಿಸಿರುವ ಬಗ್ಗೆ ನಿಗಧಿತ ಡಿಸ್‌ಚಾರ್ಜ್ ಪುಸ್ತಕ ಹೊಂದಿರಬೇಕು.

## IX. ನಿಗಧಿತ ಶುಲ್ಕ:

**ಅ) ಅರ್ಜಿ ಶುಲ್ಕ:**

| ವರ್ಗ | ಶುಲ್ಕ |
|---|---|
| ಸಾಮಾನ್ಯ ವರ್ಗ, 2ಎ, 2ಬಿ, 3ಎ ಮತ್ತು 3ಬಿ | ರೂ.420/- |
| ಪ.ಜಾತಿ, ಪ.ಪಂಗಡ, ವರ್ಗ-1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ.220/- |

ಆ) ಅರ್ಜಿ ಶುಲ್ಕ ಪಾವತಿ ಮಾಡುವ ವಿಧಾನ: (ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ ಮಾತ್ರ ಶುಲ್ಕವನ್ನು ಪಾವತಿಸುವುದು)

www.mybmtc.com ವೆಬ್ ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಕೂಡಲೇ ಅಭ್ಯರ್ಥಿಯು ಚಲನ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ (Computerised Post Offices only) ಮಾತ್ರ e-payment ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂಚೆ ಕಛೇರಿಯಲ್ಲಿ ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿಯನ್ನು ದಾಖಲಾತಿ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಬೇರೆ ಯಾವುದೇ ರೀತಿ ಶುಲ್ಕ ಪಾವತಿಸಿದ್ದಲ್ಲಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

## X. ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ:

1) ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಬೆಮಸಾಸಂಸ್ಥೆಯ ವೆಬ್‌ಸೈಟ್ www.mybmtc.com ಮೂಲಕ ಸಲ್ಲಿಸಬೇಕು

   1) **ದಿನಾಂಕ: 11.12.2017 ರಿಂದ 26.12.2017ರವರೆಗೆ ವೆಬ್‌ಸೈಟ್ ತೆರೆದಿರುತ್ತದೆ**. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 26.12.2017ರ ಸಂಜೆ 05.30 ಗಂಟೆಯೊಳಗೆ ಆನ್‌ಲೈನ್‌ನಲ್ಲಿ

ಸಲ್ಲಿಸಬಹುದಾಗಿರುತ್ತದೆ ಮತ್ತು ಅರ್ಜಿ ಸಲ್ಲಿಸಿದ ನಂತರ ದೊರೆಯುವ ಚಲನ್ ಪ್ರತಿಯನ್ನು ಪಡೆದು ಎಲೆಕ್ಟ್ರಾನಿಕ್ ಅಂಚೆ ಕಛೇರಿಯಲ್ಲಿ ಶುಲ್ಕವನ್ನು ಪಾವತಿಸಲು ದಿನಾಂಕ:28.12.2017ಕೊನೆಯ ದಿನಾಂಕವಾಗಿರುತ್ತದೆ.

2) ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು ಹಾಗೂ ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಪ್ರತಿಯನ್ನು ಮತ್ತು ಅಂಚೆ ಕಛೇರಿ ಚಲನ್ ಪ್ರತಿಗಳನ್ನು ಮುದ್ರಿಸಿಕೊಳ್ಳುವುದು.
3) ಮುದ್ರಿತ ಅರ್ಜಿ ಮತ್ತು ಅರ್ಜಿ ಶುಲ್ಕ ಪಾವತಿಯ ಅಂಚೆ ಕಛೇರಿ ಚಲನ್ ಪ್ರತಿಗಳನ್ನು ಅಭ್ಯರ್ಥಿಗಳು ತಮ್ಮ ಬಳಿ ಇಟ್ಟುಕೊಂಡು ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.

## XI. ಆಯ್ಕೆ ವಿಧಾನ:

### 1. ಚಾಲಕ ಹುದ್ದೆಗೆ :

ಅಭ್ಯರ್ಥಿಗಳು ಮೂಲದಾಖಲಾತಿಗಳ ಪರಿಶೀಲನೆಗೆ ಹಾಗೂ ಚಾಲನಾ ವೃತ್ತಿ ಪರೀಕ್ಷೆಗೆಸೂಚಿಸಲಾದ ದಿನಾಂಕದಂದು ತಪ್ಪದೇ ಹಾಜರಾಗುವುದು.

ಮೂಲದಾಖಲಾತಿಗಳು ಮತ್ತು ದೇಹದಾರ್ಢ್ಯತೆ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ಚಾಲನಾ ವೃತ್ತಿ ಪರೀಕ್ಷೆಗೆ ಒಳಪಡಿಸಲಾಗುವುದು. ಚಾಲನಾ ವೃತ್ತಿ ಪರೀಕ್ಷೆಯನ್ನು ತಲಾ 25 ಅಂಕಗಳಂತೆ ಎರಡು ಬಾರಿ ಒಟ್ಟು 50 ಅಂಕಗಳಿಗೆ ನಡೆಸಲಾಗುತ್ತದೆ. ಚಾಲನಾ ವೃತ್ತಿ ಪರೀಕ್ಷೆಯಲ್ಲಿ 5 ವಿವಿಧ ರೀತಿಯ ಪರೀಕ್ಷೆಗಳಿದ್ದು, ಎರಡು ಬಾರಿ ನಡೆಸಲಾಗುವ ಈ ಎಲ್ಲಾ ಪರೀಕ್ಷೆಗಳಲ್ಲಿ ಕನಿಷ್ಠ 25 ಅಂಕಗಳು ಮತ್ತು ಅದಕ್ಕಿಂತ ಹೆಚ್ಚು ಗಳಿಸಿದ ಅಭ್ಯರ್ಥಿಗಳನ್ನು ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಉತ್ತೀರ್ಣರೆಂದು ಪರಿಗಣಿಸಲಾಗುವುದು. 25ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳನ್ನು ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು ಹಾಗೂ ಅವರುಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಹೊರಗಿಡಲಾಗುವುದು.

ಚಾಲನಾ ವೃತ್ತಿ ಪರೀಕ್ಷೆಯ 5 ವಿವಿಧ ಪರೀಕ್ಷೆಗಳ ಪೈಕಿ ಈ ಕೆಳಕಂಡ 3 ಪರೀಕ್ಷೆಗಳಲ್ಲಿ ಎರಡು ಬಾರಿ ನಡೆಸಲಾಗುವ ಪ್ರತೀ ಪರೀಕ್ಷೆಯಲ್ಲಿ ನಿಗಧಿತ ಅಂಕಗಳಲ್ಲಿ ಕನಿಷ್ಠ ಶೇಕಡ 50 ರಷ್ಟು ಅಂಕಗಳನ್ನು ಗಳಿಸಿದಲ್ಲಿ ಮಾತ್ರ ಮುಂದಿನ ಪರೀಕ್ಷೆಗೆ ಅರ್ಹರಾಗುತ್ತಾರೆ.

| ಕ್ರ. ಸಂ | ಪರೀಕ್ಷೆಯ ವಿಧಾನ | ಮೊದಲನೇ ಪರೀಕ್ಷೆಗೆ ನಿಗಧಿಪಡಿಸಿರುವ ಅಂಕಗಳು | ಎರಡನೇ ಪರೀಕ್ಷೆಗೆ ನಿಗಧಿಪಡಿಸಿರುವ ಅಂಕಗಳು | ಎರಡೂ ಪರೀಕ್ಷೆಯ ಒಟ್ಟು ಅಂಕಗಳು | ಎರಡೂ ಪರೀಕ್ಷೆಗಳಿಂದ ಗಳಿಸ ಬೇಕಾದ ಕನಿಷ್ಠ ಅಂಕಗಳು | ಸಮಯ |
|---|---|---|---|---|---|---|
| 1 | ಬಸ್ಸನ್ನು "ಎಸ್" ರ ಪಥದಲ್ಲಿ ಹಿಂದಕ್ಕೆ ಚಾಲಿಸುವುದು | 07 | 07 | 14 | 07 | 3 ನಿಮಿಷ |
| 2 | ಬಸ್ಸನ್ನು ಹಿಮ್ಮುಖ ಚಾಲಿಸಿ ನಿಲುಗಡೆ ಮಾಡುವುದು | 06 | 06 | 12 | 06 | 1 ನಿಮಿಷ |
| 3 | ಬಸ್ಸನ್ನು ಏರುಗತಿಯಲ್ಲಿ ನಿಲ್ಲಿಸಿ ಮುಂದಕ್ಕೆ ಚಾಲಿಸುವುದು | 05 | 05 | 10 | 05 | ಸಮಯ ಇಲ್ಲ |

ಅಭ್ಯರ್ಥಿಗಳು ಗಣಕೀಕೃತ ಚಾಲನಾ ಟ್ರ್ಯಾಕ್‌ನಲ್ಲಿ ನಡೆಸುವ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇರೆಗೆ ಮತ್ತು ಜಾರಿಯಲ್ಲಿರುವ ಮೀಸಲಾತಿ ನಿಯಮಾನುಸಾರ ಆಯ್ಕೆ ಮಾಡಲಾಗುವುದು. ಮೂಲದಾಖಲಾತಿಗಳ ಪರಿಶೀಲನೆಗೆ ಗೈರು ಹಾಜರಾದ ಅಭ್ಯರ್ಥಿಗಳಿಗೆ /ಪರಿಶೀಲನೆಗೆ ಹಾಜರಾದರೂ ಅಗತ್ಯ ದಾಖಲಾತಿಗಳನ್ನು ಹಾಜರುಪಡಿಸದ ಅಭ್ಯಥೀಗಳಿಗೆ ಚಾಲನಾ ವೃತ್ತಿ ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ.

## 2) ನಿರ್ವಾಹಕ, ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ ಮತ್ತು ತಾಂತ್ರಿಕ ಸಹಾಯಕ ಹುದ್ದೆಗೆ:

1) ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುತ್ತದೆ.
2) ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ಬೆಂಗಳೂರು/ಮೈಸೂರು/ಗುಲ್ಬರ್ಗಾ/ಹುಬ್ಬಳ್ಳಿ ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ಬರೆಯುವ ಕೇಂದ್ರವನ್ನು ಆನ್‌ಲೈನ್ ಅರ್ಜಿಯಲ್ಲಿ ಆಯ್ಕೆ ಮಾಡಿಕೊಳ್ಳುವುದು.
3) ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಕನಿಷ್ಠ ಶೇಕಡ 30 ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಪ್ರಕ್ರಿಯೆಗೆ ಅರ್ಹರೆಂದು ಪರಿಗಣಿಸಲಾಗುವುದು.
4) ಅರ್ಹ ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲಿ ಶೇಕಡ 75 ಅಂಕಗಳು ಹುದ್ದೆಯ ನಿಗಧಿತ ವಿದ್ಯಾರ್ಹತೆಯಲ್ಲಿ ಗಳಿಸಿರುವ ಅಂಕಗಳಲ್ಲಿ ಶೇಕಡ 25 ಅಂಕಗಳನ್ನು ಸೇರಿಸಿ ಮೆರಿಟ್ ಆಧಾರದ ಮೇಲೆ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನುಸಾರ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೂಲ ದಾಖಲಾತಿಗಳ ಹಾಗೂ ದೇಹ ದಾರ್ಢ್ಯತೆ ಪರಿಶೀಲನೆಗೆ ಒಳಪಡಿಸಲಾಗುವುದು

## 3) ಭದ್ರತಾ ರಕ್ಷಕ ಹುದ್ದೆಗೆ:

1) ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುತ್ತದೆ.
2) ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ಬೆಂಗಳೂರು/ಮೈಸೂರು/ಗುಲ್ಬರ್ಗಾ/ಹುಬ್ಬಳ್ಳಿ ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ಬರೆಯುವ ಕೇಂದ್ರವನ್ನು ಆನ್ ಲೈನ್ ಅರ್ಜಿಯಲ್ಲಿ ಆಯ್ಕೆ ಮಾಡಿಕೊಳ್ಳುವುದು.
3) ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಕನಿಷ್ಠ ಶೇಕಡ 30 ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಪ್ರಕ್ರಿಯೆಗೆ ಅರ್ಹರೆಂದು ಪರಿಗಣಿಸಲಾಗುವುದು.
4) ಅರ್ಹ ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲಿ ಶೇಕಡ 75 ಅಂಕಗಳಿಗೆ ಹುದ್ದೆಯ ನಿಗಧಿತ ವಿದ್ಯಾರ್ಹತೆಯಲ್ಲಿ ಗಳಿಸಿರುವ ಅಂಕಗಳಲ್ಲಿ ಶೇಕಡ 25 ಅಂಕಗಳನ್ನು ಸೇರಿಸಿ ಮೆರಿಟ್ ಆಧಾರದ ಮೇಲೆ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನುಸಾರ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೂಲ ದಾಖಲಾತಿಗಳ ಹಾಗೂ ದೇಹ ದಾರ್ಢ್ಯತೆ ಪರಿಶೀಲನೆಗೆ ಒಳಪಡಿಸಲಾಗುವುದು. ಅರ್ಹರಾದ ಅಭ್ಯರ್ಥಿಗಳನ್ನು ಈ ಕೆಳಕಂಡ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಒಳಪಡಿಸಲಾಗುವುದು.

**ಪುರುಷರು**

| | |
|---|---|
| 400 ಮೀಟರ್ ಓಟ | 80 ಸೆಕೆಂಡ್ ಒಳಗಡೆ ಪೂರ್ಣಗೊಳಿಸಬೇಕು |
| ಉದ್ದ ಜಿಗಿತ | 3.50 ಮೀಟರ್‌ಗಿಂತ ಕಡಿಮೆ ಇಲ್ಲದಂತೆ ಜಿಗಿಯಬೇಕು |
| 7.26 ಕೆ.ಜಿ. ತೂಕದ ಗುಂಡು ಎಸೆತ | 5.0 ಮೀಟರ್‌ಗಿಂತ ಕಡಿಮೆ ಇಲ್ಲದಂತೆ ಎಸೆಯಬೇಕು |

**ಮಹಿಳೆಯರು**

| | |
|---|---|
| 200 ಮೀಟರ್ ಓಟ | 42 ಸೆಕೆಂಡ್ ಒಳಗಡೆ ಪೂರ್ಣಗೊಳಿಸಬೇಕು |
| ಉದ್ದ ಜಿಗಿತ | 3.00 ಮೀಟರ್‌ಗಿಂತ ಕಡಿಮೆ ಇಲ್ಲದಂತೆ ಜಿಗಿಯಬೇಕು |
| 4.0 ಕೆ.ಜಿ. ತೂಕದ ಗುಂಡು ಎಸೆತ | 4.5 ಮೀಟರ್‌ಗಿಂತ ಕಡಿಮೆ ಇಲ್ಲದಂತೆ ಎಸೆಯಬೇಕು |

5) ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲಿ ಶೇಕಡ 75 ಅಂಕಗಳು ಹುದ್ದೆಯ ನಿಗಧಿತ ವಿದ್ಯಾರ್ಹತೆಯಲ್ಲಿ ಗಳಿಸಿರುವ ಅಂಕಗಳಲ್ಲಿ ಶೇಕಡ 25 ಅಂಕಗಳನ್ನು ಸೇರಿಸಿ ಮೆರಿಟ್ ಆಧಾರದ ಮೇಲೆ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಾನುಸಾರ ಆಯ್ಕೆ ಮಾಡಲಾಗುವುದು

## XII . ತರಬೇತಿ ಅವಧಿ ಭತ್ಯೆ ಮತ್ತು ವೇತನ ಶ್ರೇಣಿ:

i) ಆಯ್ಕೆಯಾದ ಅಭ್ಯರ್ಥಿಗಳನ್ನು ಎರಡು ವರ್ಷಗಳ ಕಾಲದ ವೃತ್ತಿ ತರಬೇತಿಯಲ್ಲಿ ನಿಯೋಜಿಸಲಾಗುವುದು. ಈ ತರಬೇತಿ ಅವಧಿಯಲ್ಲಿ ಕೆಳಕಂಡಂತೆ ಮಾಸಿಕ ತರಬೇತಿ ಭತ್ಯೆಯನ್ನು ನೀಡಲಾಗುವುದು:

| ಕ್ರ ಸಂ | ಹುದ್ದೆ | ರೂ. |
|---|---|---|
| 1 | ಚಾಲಕ, | 10000–00 |
| 2 | ನಿರ್ವಾಹಕ, ತಾಂತ್ರಿಕ ಸಹಾಯಕ, ಭದ್ರತಾ ರಕ್ಷಕ | 9100–00 |
| 3 | ಸಹಾಯಕ ಸಂಚಾರ ನಿರೀಕ್ಷಕ, ಕುಶಲ ಕರ್ಮಿ | 9750–00 |

ii) ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷಗಳ ವೃತ್ತಿ ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ, ಅವರನ್ನು ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯಲ್ಲಿ ನೇಮಕಗೊಳಿಸಿ ಈ ಕೆಳಕಾಣಿಸಿದಂತೆ ಕಾಲಿಕ ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗುವುದು.

| ಕ್ರ ಸಂ | ಹುದ್ದೆ | ವೇತನ ಶ್ರೇಣಿ |
|---|---|---|
| 1 | ಚಾಲಕ | 12400–170–12740–250–14240–320–15840–420–16680–530–18270–640–19550 |
| 2 | ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ | 13970–250–14470–320–15750–420–16590–530–18180–640–20740 |
| 3 | ನಿರ್ವಾಹಕ, ಭದ್ರತಾ ರಕ್ಷಕ ತಾಂತ್ರಿಕ ಸಹಾಯಕ | 11640–140–11920–170–12600–250–14100–320–15700 |

## XIII. ವಿಶೇಷ ಸೂಚನೆಗಳು:

1) ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಸಂಸ್ಥೆಯ ವೆಬ್‌ಸೈಟ್ www.mybmtc.com ಮತ್ತು ಸಂಸ್ಥೆಯ ಸೂಚನಾ ಫಲಕದಲ್ಲಿ ಹಾಗೂ ಅರ್ಹತಾ ಪಟ್ಟಿ ಪ್ರಕಟಿಸಿರುವ ಬಗ್ಗೆ ಮಾಹಿತಿಯನ್ನು ಪ್ರಮುಖ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. 1:5 ರ ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡ ಅರ್ಹ ಅಭ್ಯರ್ಥಿಗಳು ಕರೆಪತ್ರವನ್ನು ವೆಬ್‌ಸೈಟ್‌ನಿಂದ ಮುದ್ರಿಸಿಕೊಂಡು ಕರೆಪತ್ರದಲ್ಲಿ ಸೂಚಿಸಲಾದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಮೂಲ ದಾಖಲಾತಿಗಳ ಮತ್ತು ದೇಹ ದಾರ್ಢ್ಯತೆ ಪರಿಶೀಲನೆಗೆ ಹಾಜರಾಗುವುದು. ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಂಡ ಅಭ್ಯರ್ಥಿಗಳಿಗೆ ಮೂಲ ದಾಖಲಾತಿಗಳ ಮತ್ತು ದೇಹದಾರ್ಢ್ಯತೆ ಪರಿಶೀಲನೆಗೆ ಅಂಚೆಯ ಮೂಲಕ ಪ್ರತ್ಯೇಕ ಕರೆಪತ್ರಗಳನ್ನು ಕಳುಹಿಸಲಾಗುವುದಿಲ್ಲ.

2) ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವಂತೆ ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು.

ಅ) ಅಂಚೆ ಕಛೇರಿಯಲ್ಲಿ ಅರ್ಜಿ ಶುಲ್ಕ ಪಾವತಿಸಿದ ಚಲನ್‌ನ ಪ್ರತಿ.

ಆ) ಹುದ್ದೆಗೆ ನಿಗಧಿ ಪಡಿಸಲಾಗಿರುವ ವಿದ್ಯಾರ್ಹತೆಯ ಅಂಕಪಟ್ಟಿ

ಇ) ಚಾಲ್ತಿಯಲ್ಲಿರುವ ಸರಕು ಸಾಗಾಣಿಕೆ/ಪ್ರಯಾಣಿಕರ ಭಾರಿ ವಾಹನ ಚಾಲನಾ ಪರವಾನಗಿ ಮತ್ತು ಕರ್ನಾಟಕ ಬ್ಯಾಡ್ಜ್. (ಚಾಲಕ ಹುದ್ದೆಗೆ)

ಈ) ಚಾಲ್ತಿಯಲ್ಲಿರುವ ನಿರ್ವಾಹಕರ ಪರವಾನಗಿ ಮತ್ತು ನಿರ್ವಾಹಕರ ಬ್ಯಾಡ್ಜ್ (ನಿರ್ವಾಹಕ ಹುದ್ದೆಗೆ)

ಉ) ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಜನ್ಮ ದಿನಾಂಕವನ್ನು ನಮೂದಿಸಿರದಿದ್ದ ಪಕ್ಷದಲ್ಲಿ ಜನ್ಮ ದಿನಾಂಕ ದೃಢೀಕರಣಕ್ಕಾಗಿ ಶಾಲಾ ವರ್ಗಾವಣಾ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.

ಊ) ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)

ಋ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, ಮತ್ತು 3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ).

ಎ) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)

ಏ) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

ಒ) ಯೋಜನಾ ನಿರಾಶ್ರಿತ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

ಓ) ಇಲಾಖಾ ಅಭ್ಯರ್ಥಿಗಳು ಸೇವೆ ಸಲ್ಲಿಸುತ್ತಿರುವ ಬಗ್ಗೆ ಅವರು ಅರ್ಜಿ ಸಲ್ಲಿಸಲು ಆಕ್ಷೇಪಣೆ ಇಲ್ಲವೆಂಬ ಪ್ರಮಾಣ ಪತ್ರವನ್ನು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಸ್ಥರಿಂದ ಪಡೆದಿಟ್ಟುಕೊಂಡಿರಬೇಕು.

## XIV. ಇತರೆ ಸೂಚನೆಗಳು:

1) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿದ ಅರ್ಜಿಯ ಡೌನ್‌ಲೋಡ್ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಂಡಿದ್ದು ಮೂಲದಾಖಲಾತಿಗಳ ಪರಿಶೀಲನೆಗೆ ಹಾಜರಾಗುವ ಸಮಯದಲ್ಲಿ ಸಲ್ಲಿಸುವುದು.

2) ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಸಂಸ್ಥೆಯಲ್ಲಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ / ಕೈಗಾರಿಕಾ / ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ / ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದು ಕಂಡು ಬಂದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.

3) ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುತ್ತದೆ.

4) ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

5) ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್‌ಲೈನ್ ಮುಖಾಂತರ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ತಪ್ಪದೇ ಗಮನಿಸತಕ್ಕದ್ದು.

6) ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ಅವರು ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.

7) ಅಭ್ಯರ್ಥಿಗಳು ಪ.ಜಾತಿ / ಪ.ಪಂ. / ವರ್ಗ-1/IIಎ/IIಬಿ/IIIಎ/IIIಬಿ ಅಡಿಯಲ್ಲಿ ಹಾಗೂ ಇತರೆ ಗ್ರಾಮೀಣ / ಮಾಜಿ ಸೈನಿಕ/ ಕನ್ನಡ ಮಾಧ್ಯಮ **(horizontal reservation)** ಇತ್ಯಾದಿಗಳ ಮೀಸಲಾತಿಗಳನ್ನು ಕೋರುತ್ತಿದ್ದಲ್ಲಿ ಕರ್ನಾಟಕ ಸರ್ಕಾರವು ನಿಗಧಿಪಡಿಸಿರುವ ಅರ್ಹತೆಯನ್ನು (ಕ್ರೈಟೀರಿಯ) ಸರಿಯಾಗಿ ತಿಳಿದುಕೊಂಡು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

8) ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪಧನ ಪಾವತಿ ಕಾಯ್ದೆ 1972 ರನ್ವಯ ಉಪಧನ ಪಡೆಯಲು ಅರ್ಹರು.

9) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಕ.ರಾ.ರ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆಗಳಿಗೆ ವರ್ಗಾವಣೆ ಕೋರಲು ಅರ್ಹರಲ್ಲ.

10) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕನ್ನಡವನ್ನು ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಸಂಸ್ಥೆಯ ವತಿಯಿಂದ ನಡೆಸುವ ಕನ್ನಡ ಭಾಷಾ ಜ್ಞಾನದ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

11) ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ / ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೇ ನೌಕರಿಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

12) ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನಿರ್ಧಾರವೇ ಅಂತಿಮವಾಗಿರುತ್ತದೆ.

13) ಅಭ್ಯರ್ಥಿಯು ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಅವರನ್ನು ಯಾವ ಮುನ್ಸೂಚನೆ ನೀಡದೇ ಅವರನ್ನು ಅನರ್ಹಗೊಳಿಸಲಾಗುವುದು.

14) ನೇಮಕಾತಿಯ ವಿವಿಧ ಹಂತಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ www.mybmtc.com ನಲ್ಲಿ ಪಡೆಯಬಹುದಾಗಿರುತ್ತದೆ. ಆದ್ದರಿಂದ, ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳು ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಅಸ್ಪದವಿರುವುದಿಲ್ಲ.

15) **ಪ್ರಚಲಿತ ಮೀಸಲಾತಿ ನಿಯಮಾನುಸಾರ ಹಾಗೂ ಗಣಕೀಕೃತ ಚಾಲನಾ ವೃತ್ತಿ ಪಥದಲ್ಲಿ ನಡೆಸುವ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಚಾಲಕ ಹುದ್ದೆಗೆ ಹಾಗೂ ನಿಗಧಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಶೇಕಡ 25 ರಷ್ಟು ಅಂಕಗಳನ್ನು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡ 75 ರಷ್ಟಕ್ಕೆ ಸೇರಿಸಿ ಅರ್ಹತಾ ಆಧಾರದ ಮೇಲೆ ನಿರ್ವಾಹಕ,ಸಹಾಯಕ ಸಂಚಾರ ನಿರೀಕ್ಷಕ, ಕುಶಲಕರ್ಮಿ ಹಾಗೂ ತಾಂತ್ರಿಕ ಸಹಾಯಕ ಹುದ್ದೆಗಳಿಗೆ ಆಯ್ಕೆ ಮಾಡುವುದರಿಂದ ಅಭ್ಯರ್ಥಿಗಳು ಯಾವುದೇ ಆಮಿಷಕ್ಕೆ ಒಳಗಾಗಬಾರದು.**

**ವ್ಯವಸ್ಥಾಪಕ ನಿರ್ದೇಶಕರು.**

ಪ್ರತಿಯನ್ನು ಗೌರವಪೂರ್ವಕವಾಗಿ: ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರ ಆಪ್ತ ಕಾರ್ಯದರ್ಶಿ ರವರ ಮಾಹಿತಿಗಾಗಿ ಹಾಗೂ ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರುಗಳ ಗಮನಕ್ಕೆ ತರಲು ಕೋರಲಾಗಿದೆ.

ಪ್ರತಿಯನ್ನು ಗೌರವಪೂರ್ವಕವಾಗಿ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ರವರ ಮಾಹಿತಿಗಾಗಿ.

ಪ್ರತಿಯನ್ನು: ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ರವರ ಮಾಹಿತಿಗಾಗಿ.

ಪ್ರತಿಯನ್ನು: ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ

ಪ್ರತಿಯನ್ನು: ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್‌ವ್ಯವಸ್ಥೆ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ

ಪ್ರತಿಯನ್ನು: ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಬೆಂಗಳೂರು ರವರ ಮಾಹಿತಿಗಾಗಿ

ಪ್ರತಿಯನ್ನು: ಉದ್ಯೋಗಾಧಿಕಾರಿ, ಉದ್ಯೋಗ ವಿನಿಮಯ ಕೇಂದ್ರ(ತಾಂತ್ರಿಕ), ಏಶಿಯಾಟಿಕ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ

ಪ್ರತಿಯನ್ನು: ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ, ಬೆಮಸಾಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಈ ಪ್ರಕಟಣೆಯನ್ನು ತಮ್ಮ ವಿಭಾಗೀಯ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು: ಎಲ್ಲಾ ಇಲಾಖಾ ಮುಖ್ಯಸ್ಥರು, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ.

ಪ್ರತಿಯನ್ನು: ಎಲ್ಲಾ ಘಟಕ ವ್ಯವಸ್ಥಾಪಕರು, ಬಸ್ ನಿಲ್ದಾಣಗಳ ಸಹಾಯಕ ಸಂಚಾರ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗೆ ಹಾಗೂ ಈ ಪ್ರಕಟಣೆಯನ್ನು ಸೂಚನಾಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

**ವ್ಯವಸ್ಥಾಪಕ ನಿರ್ದೇಶಕರು**